ಹೆಂಡತಿಯರಿಬ್ಬರೂ ನಮಗೆ ಒಳ್ಳೆಯವರಾಗಿ ಕಾಣುತ್ತಿದ್ದರು. 'ಎರಡು ದಿನಕ್ಕೆ ಯಾರ ಹುಳುಕು ಕಾಣಲ್ಲ ಶಾರಿ' ಅಮ್ಮ ಮೆಲ್ಲಗೆ ಗೊಣಗುತ್ತಿದ್ದಳು.

ಅವಳ ಸಮಾಧಾನಕ್ಕೆ ಏನಾದರೂ ಹೇಳಲೇ ಬೇಕಿತ್ತು. 'ಬಿಡಮ್ಮ ಒಬ್ಬೊಬ್ಬರ ಮನೇನಲ್ಲಿ ಒಂದೊಂದು ತರ. ಈಗ ನನ್ನೇ ನೋಡು ಮುತ್ತು ರತ್ನದಂತಹ ಎರಡು ಮುದ್ದಾದ ಮಕ್ಕಳು. ಓದಲೆಂದು ಒಬ್ಬ ವಿದೇಶಕ್ಕೆ ಹಾರಿದ. ಅವನ ಹಿಂದೆಯೇ ಅಲ್ಲಿ ಚೆಂದವಿದೆಯೆಂದು ಮತ್ತೊಬ್ಬನು ಅಮೆರಿಕ ವಾಸಿಯಾದ. ಒಬ್ಬರಾದ್ರೂ ಇಲ್ಲಿಗೆ ಬನ್ರೋ, ನಮ್ಮ ಜೊತೆಗಿರೋಕೆ ಅಂದ್ರೆ, ಅಲ್ಲಿ ಏನಿದೆಯಮ್ಮಾ? ಹೊಟ್ಟೆ ಕಿಚ್ಚಿನಿಂದ ಸಾಯೋ ನೆಂಟರಿಷ್ಟರು. ನೀವೇ ಇಲ್ಲಿಗೆ ಬಂದ್ ಬಿಡಿ. ಆಗೋಲ್ವಾ ಅಲ್ಲೇ ಇರಿ. ಆರಾಮವಾಗಿರಿ. ಎಲ್ಲ ಅನುಕೂಲಗಳನ್ನು ಮಾಡ್ಕೊಂಡು ಖುಷಿಯಾಗಿರಿ ಅಂತ ಬಾಯಿ ಮುಚ್ಚಿಸ್ತಾವೆ. ನಮ್ಮ ಖುಷಿ, ನಮ್ಮ ಸುಖ ನಮ್ಮ ಮಕ್ಕಳೊಂದಿಗೆ ಒಡನಾಟವೆಂದು ಈ ಮಕ್ಕಳಿಗೆ ಯಾಕೆ ತಿಳಿಯೋಲ್ಲ'?

ನಾವು ಇಲ್ಲೇ ನಮ್ಮ ಬದುಕನ್ನ ಕಟ್ಟಿಕೊಂಡಿದ್ದೇವೆ. ಅದಕ್ಕೆ ನಮಗಿಲ್ಲೇ ಸುಖ. ಅವುಗಳೋ ಅಲ್ಲಿ ಹೊಸ ಬದುಕನ್ನ ಕಟ್ಟಿಕೊಂಡಿದ್ದಾವೆ. ಅಲ್ಲಿಂದ ಅವರಿಗೆ ಬರೋಕೆ ಆಗೋಲ್ಲ. ಅವರಿಗೆ ಅಲ್ಲೇ ಸುಖ.

'ಹೌದು ಶಾರಿ ನೋಡಿದ್ರೆ ನಂದೇ ಅಡ್ಡಿಲ್ಲ ಕಣೇ'. ಇಂಥದ್ದೆಲ್ಲ ಹೇಳಿದಾಗ ಅಮ್ಮ ಒಂದಿಷ್ಟು ಸಮಾಧಾನವಾಗುತ್ತಿದ್ದಳು.

ಹಸೀನೋ ಬಿಸಿನೋ ಒಂದಿಷ್ಟು ಹಾಕ್ತಾರಲ್ಲ. ಬಿದ್ರೆ ಎತ್ತಕಾದ್ರೂ ಇದ್ದಾರೆ. ಜಗಳ ಮಾಡಬೇಕಂದ್ರೂ ಇದ್ದಾರೆ. ನಾನು ಯಾರೊಂದಿಗೆ ಜಗಳ ಆಡ್ಲಿ? ಯಾರೊಂದಿಗೆ ಮುನಿಸಿಕೊಳ್ಳಲಿ? ಹೋಗ್ಲಿ ಬಿಡಮ್ಮ ನಮಗಿಂತ ಕೆಳಗಿನವರನ್ನು ಅಂದ್ರೆ, ನಮಗಿಂತ ಕಷ್ಟದಲ್ಲಿರುವವರನ್ನು ನೋಡಬೇಕು. ಸಮಾಧಾನ ಸಿಗುತ್ತೆ. ಜ್ಞಾನೋದಯವಾಗುತ್ತೆ. ನಮ್ಮನ್ನ ದೇವರು ಇಷ್ಟರ ಮಟ್ಟಿಗೆ ಇಟ್ಟಿದ್ದಾನಲ್ಲ ಎಂದು, 'ನಿಜ ಶಾರಿ' ಎಂದು ಅಮ್ಮ ಮೌನ ಧರಿಸುತ್ತಿದ್ದಳು.

'ಶಾರಿ, ಎಂತಕ್ಕೆ ಅಷ್ಟೊಂದು ದುಡ್ಡು ಇಟ್ಟಿದ್ದು ರವಿಕೆ ಕಣದ ಸಂದಲ್ಲಿ?' ಊರಿಗೆ ಹೋದವಳೆ ಫೋನಿನಲ್ಲಿ ಕೂಗು ಹಾಕಿದ್ದಳು ಅಮ್ಮ.

'ನಿಂಗೆ ದಾನ ಧರ್ಮದ ಹುಚ್ಚಲ್ವೇನೇ ಕೊಟ್ಕೋ ಯಾರಿಗಾದ್ರೂ, ನೀನೆ ಹೇಳ್ತೀಯಲ್ಲ ಅಮ್ಮ, ಸತ್ತ ಮೇಲೆ ಇವೆಲ್ಲ ಬೊಜ್ಜ ಮಾಡ್ತಾವಂತೆ. ತಿಥಿ ಮಾಡಿ ಪಿಂಡ ಹಾಕ್ತಾವಂತೆ. ಅವ್ರ ತಲೆ. ಅಪ್ಪ ಅಮ್ಮ ಇದ್ದಾಗಲೇ ತಿಥಿ ಮಾಡ್ತಾವೆ. ಆಸ್ತಿ ಮನೆ ಪಾಲು ಕೊಡಿ ಅಂತ ಪಿಶಾಚಿಗಳ ಥರ ಕಾಡ್ತಾವೆ. ಇದ್ದಾಗ ಬಾಯಿ ತುಂಬಾ ಪ್ರೀತಿಯಿಂದ ಎರಡು ಮಾತು ಆಡದಿದ್ದವು ಸತ್ತ ಮೇಲೆ ಏನು ಮಾಡಿದ್ರೂ ಪ್ರಯೋಜನ ಇಲ್ಲ. ವೈಕುಂಠವಂತೆ.. ನೆಂಟರಿಷ್ಟರಿಗೆಲ್ಲ ಊಟದ ಸಮಾರಾಧನೆ. ಕಾಗೆ ಕರೆದು ದಾನ ದಕ್ಷಿಣೆ ಕೊಡೋದು ಬೇರೆ. ಸತ್ತವರಿಗೆ ಸಿಗುತ್ತ, ಕಾಣತ್ತ? ಎಲ್ಲ ಮನುಷ್ಯನ ಭ್ರಮೆ. ಜೊತೆಗೆ ಭಯ. ಭೂತ ಪಿಶಾಚಿ ಆಗಿ ನಮ್ಮನೆಲ್ಲಿ ಹಿಡ್ಕೊಂಡು ಕಾಡುತ್ತೆ ಅಂತ ಅಷ್ಟೆ, ಕಿಸಕ್ಕನೆ ನಕ್ಕ ಅಮ್ಮ ಕೊನೆಗೊಂದು ಮಾತು ನುಡಿದಿದ್ದಳು. 'ಈ ಮನೆಯ ಮುದಿ ಗೂಬೆ ಜಾಗ ಖಾಲಿ ಮಾಡ್ತು. ಈ ಮನೆಯ ಆಸ್ತಿ ಪಾಸ್ತಿಗೆಲ್ಲ ಇನ್ ಮೇಲೆ ನಾನೇ ಹಕ್ಕುದಾರ ಎಂದು ಕೂಗಿ ಹೇಳುವ ಸಮಾರಂಭ ಕಣೇ ಅದು' ಎಂದಿದ್ದಳು. ಅಮ್ಮನಾಡಿದ ಕೊನೆಯ ಮಾತು ಎಷ್ಟು ಸಮಂಜಸವಾಗಿದೆ. ಸತ್ಯದ ನುಡಿ.

'ದಾನ ಧರ್ಮ ಮಾಡೋ ಕಾಲ ಮುಗೀತು ಕಣೇ ಶಾರಿ. ಚೂರು ಪಾರು ಆಸೆನೂ ಮುಗೀತು ಕಣೆ. ಈ ಸರ್ತಿ ನಿಮ್ಮನೇಲಿ ಇದ್ದು ಬಂದಿದ್ದು ತುಂಬಾ ಚೆನ್ನಾಗಿತ್ತು ಕಣೆ. ನಿನಗೆ ದೇವರು ಒಳ್ಳೇದು ಮಾಡಲಿ' ಅಂದ ಅಮ್ಮನ ದನಿ ದುಃಖದಿಂದ ಕೂಡಿತ್ತು.

'ಅಮ್ಮ ಯಾಕೆ? ಬೇಜಾರು ಮಾಡ್ಕೋಬೇಡಮ್ಮ, ಬೇಜಾರಾದ್ರೆ ಹೇಳು ನಾನು ನಾಲ್ಕು ದಿನವಿದ್ದು ಹೋಗ್ತೀನಿ' ನಾನಂದೆ.

'ನನ್ನ ಬೇಜಾರು ಇದ್ದದ್ದೇ ಬಿಡು. ಶಾರಿ ಒಂದು ಮಾತು ಹೇಳಕ್ಕಿತ್ತು' ರಾಗವೆಳೆದಳು ಅಮ್ಮ.

'ಅದೇನ್ ಹೇಳಮ್ಮ'? ಅಲ್ಲಾ ನಾ ಸತ್ರೆ, ಬೊಜ್ಜ, ವೈಕುಂಠ ಊಟ ಎಂತದು ಮಾಡೋದು ಬೇಡಾಂತ ಅಪ್ಪಯ್ಯಂಗೆ ಹೇಳ್ ಬಿಡು. ಹೆಣ ಕೊಳಿದಿದ್ ಹಂಗೆ ಸುಟ್ಟು ಹಾಕಿ ಅಷ್ಟೇ' ಎಂದವಳೇ ಪಟ್ಟನೆ ಫೋನ್ ಇಟ್ಟು ಬಿಟ್ಟಿದ್ದಳು.

ಅಮ್ಮ ಹೇಳಿದಂತೆಯೇ ಹೆಣ್ಣಿನ ಸೌಭಾಗ್ಯ ಹೊತ್ತು ಬಡಬಡನೆ ನಡೆದು ಹೋದಳು ಬಾರದ ಊರಿಗೆ. ■

# ಫೋನ್ ಸ್ನೇಹಿತರು

ಅವನ ಮನೆಯ ಫೋನ್ ಹೊಡೆದುಕೊಂಡಿತು. ಪೇಪರ್ ಓದುತ್ತಾ ಕೂತಿದ್ದವರು ಎದ್ದು ಹೋಗಿ ರಿಸೀವರ್ ಎತ್ತಿ ಹಲೋ ಎಂದರು ಅತ್ತ ಕಡೆಯಿಂದ ಯಾರೂ ಮಾತಾಡಲೇ ಇಲ್ಲ. ಇವರು ಹತ್ತು ಹದಿನೈದು ಸಾರಿ ಹಲೋ ಹಲೋ ಅಂದ ಮೇಲೆ ಅತ್ತ ಕಡೆಯಿಂದ ಹಲೋ ನೀವು ಯಾರು ಅನ್ನೋ ಧ್ವನಿ ಕೇಳಿ ಬಂತು. ಇವರು ಸಿಟ್ಟುಗೊಂಡು 'ರೀ ಫೋನ್ ಮಾಡಿದ್ದು ನೀವು, ನೀವು ಹೇಳಬೇಕು ಯಾರು ನೀವು ಅಂತ' ಎಂದರು. ಅತ್ತ ಕಡೆಯ ಧ್ವನಿ 'ನಾನು ಯಾರು ಅಂತ ಏನು ಹೇಳಲಿ ನನಗೆ ಯಾರೂ ಸ್ನೇಹಿತರೂ ಇಲ್ಲ, ನನ್ನವರು ಅನ್ನೋರೂ ಯಾರೂ ಇಲ್ಲ' ಎಂದರು. 'ಮತ್ತೆ ನಮ್ಮನೆಗೆ ಯಾಕೆ ಫೋನ್ ಮಾಡಿದ್ರಿ' ಅಂತ ಕೇಳಿದರೆ 'ಈಗ ಎರಡು ದಿನದ ಹಿಂದೆ ಈ ನಂಬರಿನಿಂದ ನನ್ನ ಮನೆಗೆ ಫೋನ್ ಬಂದಿತ್ತು ರಾಮಸ್ವಾಮಿ ಜಾಗೀರ್ದಾರ್ ಇದಾರಾ ಅಂತ ಕೇಳಿದರು. ನಾನು ರಾಂಗ್ ನಂಬರ್, ಇದು ಕೃಷ್ಣಸ್ವಾಮಿ ಕಾರವಾರ ಅವರ ಮನೆ' ಎಂದೆ.

'ಒಬ್ಬರಾದರೂ ನನಗೆ ಫೋನ್ ಮಾಡಿದರಲ್ಲ ಅಂತ ನನಗೆ ಖುಷಿಯಾಗಿ ಇದು ಯಾರ ಮನೆ ನಂಬರು ಅಂತ ತಿಳ್ಕೊಳೋಕೆ ಇವತ್ತು ಫೋನ್ ಮಾಡಿದೆ' ಎಂದರು. 'ಹೌದಾ, ನಿನ್ನೆ ನನ್ನ ಸ್ನೇಹಿತ ರಾಮಸ್ವಾಮಿ ಜಾಗಿರ್ದಾರ್ ಮನೆಗೆ ಡಯಲ್ ಮಾಡೋಕೆ ಹೋಗಿ ನಿಮ್ಮ ಮನೆ ನಂಬರಿಗೆ ಡಯಲ್ ಮಾಡಿದ್ದು ನಾನೇ, ನನ್ನ ಹೆಸರು ಶ್ರೀನಿವಾಸ ಮೂರ್ತಿ ಹೊಸನಗರ ' ಎಂದು ಇತ್ತ ಕಡೆಯವರು ಹೇಳಿದ ಮೇಲೆ ಇಬ್ಬರೂ ಹತ್ತು ನಿಮಿಷ ಮಾತಾಡಿದರು. ಅವತ್ತಿನಿಂದ ದಿನಾ ಒಂದು ಸಾರಿ ಇಬ್ಬರೂ ಮಾತಡುತ್ತಿದ್ದಾರೆ. ಹೀಗೇ ಆರು ತಿಂಗಳು ಕಳೆದಿದೆ. ಒಂದು ದಿನ ಶ್ರೀನಿವಾಸಮೂರ್ತಿ ಹೊಸನಗರ ಅವರು ಕೃಷ್ಣಸ್ವಾಮಿ ಕಾರವಾರ ಅವರನ್ನು ನೋಡೋಣ ಅಂದು ಅವರಿಗೆ ತಿಳಿಯದ ಹಾಗೆ ಮನೆ ವಿಳಾಸವನ್ನು ಟೆಲಿಫೋನ್ ನಂಬರಿನ ಮುಖಾಂತರ ಡೈರಕ್ಟರಿಯಲ್ಲಿ ಹುಡುಕಿ ಮನೆಗೆ ಹೋದರು. ಶ್ರೀನಿವಾಸ ಮೂರ್ತಿಯವರ ಕುತೂಹಲಕ್ಕೆ ತೆರೆ ಬಿದ್ದೇಬಿಟ್ಟಿತು. ಅವತ್ತು ಬೆಳಗ್ಗೆ ಕೃಷ್ಣಮೂರ್ತಿ ಕಾರವಾರ ಅವರು ಸತ್ತುಹೋಗಿದ್ದರು.



■ ಬೇಲೂರು ರಾಮಮೂರ್ತಿ